**ದಿಃ-03.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

## ಮುಂದುವರೆದ ಪಾಟಿಸವಾಲುಃ ಎದುರುದಾರರ ಪರ ಶ್ರೀ. ವಿ.ಎಸ್ ವಿ ವಕೀಲರಿಂದ ಃ

11. ದಿಃ 20.08.1988 ರಂದು ನಡೆದ 2 ನೇ ಲೀಸ ಕರಾರು ಪತ್ರವು ಸರ್ವೆನಂಃ 81/2 (ಇ) ಗೆ ಸಂಬಂಧಿಸದಂತೆ ಆಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಆ ಸ್ವತ್ತಿನ ಭಾಗಶಃ ಸ್ವತ್ತಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಲೀಸ್ ಅಗ್ರಿಮೆಂಟ್ 20,000 ಚದರ ಅಡಿಯ ಒಂದು ಶೆಡ್, 7,000 ಚದರ ಅಡಿಯ ಇನ್ನೊಂದು ಶೆಡ್, 5,122 ಚದರ ಅಡಿಯ ಮತ್ತೊಂದು ಶೆಡ್ ಮತ್ತು ಟೆಂಟ್ ಹೌಸ್, ಒಂದು ಓಪನ್ ಸ್ಪೇಸ್ ಗೆ ಆಗಿರುತ್ತದೆ. ಎಲ್ಲಾ ಆಸ್ತಿಗಳು ಲೀಸ್ ಕರಾರು ಪತ್ರ ದಿಃ 20.08.1998 ರಲ್ಲಿ ಒಳಗೊಂಡಿರುತ್ತದೆ. ದಿಃ 20.08.1998 ರ ಲೀಸ್ ಕರಾರು ಪತ್ರದಲ್ಲಿ ಕೇವಲ 20,000 ಚದರ ಅಡಿಯ ಒಂದು ಶೆಡ್ ಮಾತ್ರ ಒಳಗೊಂಡಿರುತ್ತದೆ ಎಂದರೆ ಸರಿಯಲ್ಲ.

12. ದಿಃ 20.08.1998 ರ ಲೀಸ್ ಕರಾರು ಪತ್ರದಲ್ಲಿ ಯಾವುದೇ ಸೆಕ್ಯೂರಿಟಿ ಠೇವಣಿಯನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದ 1996 ರಲ್ಲಿ ಪ್ರತಿವಾದಿಗಳು 15 ಲಕ್ಷ ರೂಪಾಯಿಗಳನ್ನು ಸ್ವತ್ತನ್ನು ನವೀಕರಿಸಿ ಮಾಡುವುದಕ್ಕೆ ಕೊಟ್ಟಿರುತ್ತಾರೆ. ದಿಃ 05.03.1997 ರ ಮೊದಲ ಲೀಸ ಕರಾರು ಪತ್ರದಲ್ಲಿ ರೂ.7,50,000/-ಯನ್ನು ಲೀಸ ಸೆಕ ಯೂರಿಟಿ ಡೆಪಾಸಿಟ್ ಆಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 1996 ರಲ್ಲಿ ರೂ. 15 ಲಕ್ಷ ನೀಡಿದ್ದು, ನನ್ನ ಮಾವ ಮತ್ತು ಚಿಕ್ಕ ಮಾವ ರವರು ಭಾಗ ಪಡೆದಿದ್ದರು ಎಂದು ನುಡಿಯತ್ತಾರೆ.

13. ನರಸಪ್ಪರೆಡ್ಡಿ ಎದುದಾರರ ನಂ.4 ಮತ್ತು ಎದುದಾರರ ನಂ.5 ನಿಲಮ್ಮ ಅವರು ಮೃತ ಪಟ್ಟಿದ್ದು, ಅವರ ವಾರಸ್ತದಾರರನ್ನು ಪಕ್ಷದಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮುಂದುವರೆದು ಅವರನ್ನು ಅದಾಗಲೇ ಎಕ್ಷಪಾರ್ಟೆ ಮಾಡಿದ್ದಾರೆ ಎಂದು ನುಡಿಯತ್ತಾರೆ.

14. ಓ ಎಸ್ ಸಂಖ್ಯೆ:6019/2005 ನ್ನು ನಾವು ಪ್ರಶ್ನಿಸಿ ಮೇಲು ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾಗರಾಜುರವರ ಕುಟುಂಬದರು ಈ ದಾವೆಯ ಬಗ್ಗೆ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

15. ನನಗೆ ಅಮಲಜಾರಿ ಅರ್ಜಿ ನಂ:193/2013 ಬಗ್ಗೆ ಮಾಹಿತಿ ನನಗೆ ಆ ಪ್ರಕರಣ ಮುಗಿದು ನಂತರ ನನಗೆ ಗೊತ್ತಾಗಿದೆ ಎಂದು ನುಡಿಯುತ್ತಾರೆ. ನನಗೆ ಆ ಪ್ರಕರಣದ ಬಗ್ಗೆ ಗೊತ್ತಿಲ್ಲದ ಕಾರಣ ಆ ಪ್ರಕರಣದಲ್ಲಿ ಹಾಜರಾಗಿಲ್ಲ ಎಂದರೆ ಸರಿ. ಈ ಅಮಲಜಾರಿ ಅರ್ಜಿ ನಂ:193/2013 ಅರ್ಜಿಯಲ್ಲಿ ಒಂದು ಎಕರೆ ಜಾಗವನ್ನು ಅರ್ಜಿದಾರರಿಗೆ ನ್ಯಾಯಾಲಯದ ಆದೇಶದಂತೆ ಆಗಿರುತ್ತದೆ.

16. 1998 ರಲ್ಲಿ ನಮಗೆ ರೂ.20,122/- ದಂತೆ 6 ಮಂದಿ ಒಟ್ಟಾಗಿ 2 ನೇ ಲೀಸ ಕರಾರಂತೆ ಬಾಡಿಗೆ ನೀಡುತ್ತಿದ್ದರು. 6 ಮಂದಿಗೆ ತಲಾ ರೂ.10,000/- ರಂತೆ ಬಾಡಿಗೆಯನ್ನು 2 ನೇ ಲೀಸ ಕರಾರಂತೆ ನೀಡುತ್ತಿದ್ದರು ಎಂದರೆ ಸರಿಯಲ್ಲ. 6 ಮಂದಿ ತಲಾ ರೂ.10,000/-ದಂತೆ ಒಟ್ಟು ರೂ.60,000/-ಯನ್ನು ಪ್ರತಿತಿಂಗಳು ಬಾಡಿಗೆಯನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಲೀಸ ಕರಾರಿನ 1 ವರ್ಷದ ನಂತರ ಈ 6 ಮಂದಿ ರೂ.10,000/- ಗಳ ಚೆಕ್ ಗಳನ್ನು ಪ್ರತಿ ತಿಂಗಳು ಮಾರ್ಚ್1999 ರಿಂದ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಈಗ ಬಾಡಿಗೆಯನ್ನು ನೀಡುತ್ತಿಲ್ಲ ಸಾಕ್ಷಿ ಮುಂದುವರೆದು ಕಳೆದ 3 ವರ್ಷದಿಂದ ನೀಡುತ್ತಿಲ್ಲ. ನಾವು 2016 ರಲ್ಲಿ ಸ್ವತ್ತನು ಬಿಟ್ಟುಕೊಡುವಂತೆ ನೋಟಿಸ ನೀಡುವುದರಿಂದ ಬಾಡಿಗೆಯನ್ನು ನೀಡುತ್ತಿಲ್ಲ.

17. ಸರ್ವೆ ನಂ: 81/2 ಕ್ಕೆ ಸಂಬಂಧಿಸಿದಂತೆ, ರೂ.23,50,000/- ಹಣ ಸೆಕ್ಯೂರಿಟಿ ಡೆಪಾಸಿಟ್ ಆಗಿ ನೀಡಿರುತ್ತೇವೆ ಎಂದರೆ ಸರಿ ಸಾಕ್ಷಿ ಮುಂದುವರೆದು 1996 ರಲ್ಲಿ 15,00,000 ರೂ ಹಣವನ್ನು ಸಾಲವಾಗಿ ಮತ್ತು ನನ್ನ ಚಿಕ್ಕ ಮಾವನಿಗೆ ರೂ,8,50,000 ಗಳನ್ನು ಕಂಪೌಂಡ್ ಕಟ್ಟಲು ಸಾಲವಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ಆ ಹಣವನ್ನು ಸೆಕ್ಯೂರಿಟಿ ಡೆಪಾಸಿಟ್ ಆಗಿ ನೀಡಿರುತ್ತಾರೆ ಮತ್ತು ಆ

ಹಣವನ್ನು ಯಾವುದಕ್ಕೆ ಬೇಕು ಎಂದು ಬಳಸಿದ್ದೇವೆ ಎಂದರೆ ಸರಿಯಲ್ಲ.

18. ಮಂಜುನಾಥ ಇಂಡಸ್ಟ್ರೀಸ್ ಬಗ್ಗೆ ನನಗೆ ಮಾಹಿತಿ ಇದೆ. ಅದು ಕಂಪನಿ ಆಗಿರುತ್ತದೆ. ಅದರಲ್ಲಿ ನರಸಪ್ಪರೆಡ್ಡಿ, ನಾಗರಾಜು, ಹೇಮಚಂದ್ರ ರವರು ಮಾಲೀಕರು ಆಗಿದ್ದರು. ಈ ಕಂಪನಿ ಈಗ ಇಲ್ಲ. ಆ ಸಂದರ್ಭದಲ್ಲಿ ಆ 3 ಜನ ನೋಡಿಕೊಳ್ಳುತ್ತಿದ್ದರು. ಅವರು ಆದಾಯ ತೆರಿಗೆ ಕಟ್ಟುತ್ತಿದ್ದರು. ಕಂಪನಿಯ ಲಾಭ ನಷ್ಟಗಳ ಬಗ್ಗೆ ನನಗೆ ಗೊತ್ತಿಲ್ಲ. ಅದರ ವಾರ್ಷಿಕ ಆದಾಯ ನನಗೆ ಗೊತ್ತಿಲ್ಲ. ಮಂಜುನಾಥ ಇಂಡಸ್ಟ್ರೀಸ್ ನಷ್ಟ ಹೊಂದಿ ಮುಚ್ಚಿ ಹೋಗುವ ಸಂದರ್ಭದಲ್ಲಿ ಎದುರುದಾರರು ಕೆ.ಎಸ.ಎಫ.ಸಿ ಗೆ ಒಂದೆ ಬಾರಿ ಸೆಟಲಮೆಂಟ್ ಮಾಡಿದ್ದರು ಎಂದರೆ ಸರಿಯಲ್ಲ. ಕೆ.ಎಸ.ಎಫ.ಸಿ ಯಿಂದ ಮಂಜುನಾಥ ಇಂಡಸ್ಟ್ರೀಸ್ ಪರವಾಗಿ ಎದುರುದಾರರಾದ 4 ಮತ್ತು 6 ರವರು ಸಾಲವನ್ನು ಪಡೆದಿದ್ದರು ಎಂದರೆ ಸರಿ. ಸಾಲದ ಹಣವು ರೂ.1,23,25,867/- ಆಗಿದ್ದು ಆ ಹಣವನ್ನು ಎದುರುದಾರರಾದ 1 ರಿಂದ 3 ರವರು ಕಟ್ಟಿದ್ದರು ಎಂದರೆ ಸಾಕ್ಷಿ ಮುಂದುವರೆದು ನಮಗೆ ನೀಡಬೇಕಾದ ಬಾಡಿಗೆ ಹಣದಿಂದ ಕಟ್ಟಿರುತ್ತಾರೆ ಮತ್ತು ಸಾಲದ ಹಣ ಕೇವಲ ರೂ.45,00,000/- ಎಂದು ನುಡಿಯುತ್ತಾರೆ. ಮಂಜುನಾಥ ಇಂಡಸ್ಟ್ರೀಸ್‌ರವರು ಸಾಲದ ಕಂತುಗಳನ್ನು ಕಟ್ಟದೆ ಸುಸ್ತಿದಾರರಾಗಿದ್ದು, ಕೆ.ಎಸ.ಎಫ.ಸಿ ರವರು ಅದನ್ನು ಜಪ್ತಿ ಮಾಡಲು ಬಂದಿದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು ಎದುರುದಾರರಾದ 1 ರಿಂದ 3 ರವರು ಬಾಡಿಗೆ ಹಣವನ್ನು ನೀಡದೆ ಕೆ.ಎಸ.ಎಫ.ಸಿ ರವರಿಗೆ ಸಾಲದ ಕಂತದ ಹಣವನ್ನು ನೀಡದೆ ಇರುವುದರಿಂದ ನಮಗೆ ನೋಟಿಸ್ ಬಂದಿತ್ತು ಎಂದು ನುಡಿಯುತ್ತಾರೆ.

19. ಒನ್ ಟೈಮ ಸೆಟಲ್‌ಮೆಂಟ್ 48 ಕಂತುಗಳಲ್ಲಿ ದಿಃ 23.08.1998 ರಿಂದ ದಿಃ 13.11.2003 ರವರೆಗೆ ಇತ್ತು ಎಂದರೆ ನಮಗೆ ನೀಡಬೇಕಾದ ಬಾಡಿಗೆ ಹಣವನ್ನು ಕಂತುಗಳಲ್ಲಿ ಕಟ್ಟಬೇಕಾಗಿದ್ದು ಎಂದು ನುಡಿಯುತ್ತಾರೆ. ಇದು ಅಮಲುಜಾರಿ ಸಂಖ್ಯೆಃ 193/2013 ಕ್ಕೆ ಸಂಬಂಧಿಸಿದ್ದು, ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ತಪ್ಪಾಗಿದ್ದಲೇ ಈ ಪ್ರಕರಣವನ್ನು ಹಾಕಿದ್ದೇವೆ. ಎದುರುದಾರರಾದ 4 ಮತ್ತು 6 ಕೆ.ಎಸ.ಎಫ.ಸಿ ರವರಿಂದ ರೂ.54,70,000/- ಹಣವನ್ನು ಸಾಲವಾಗಿ ಪಡೆದಿದ್ದರು ಎಂದರೆ

ಸರಿಯಲ್ಲ. ಕೆ.ಎಸ.ಎಫ.ಸಿ ಸಾಲವನ್ನು ಮಾಡುವಾಗ ಅಡಮಾನವಾಗಿ ಮಂಜುನಾಥ ಇಂಡಸ್ಟ್ರೀಯನ್ನು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಜಮೀನನ್ನು ಅಡಮಾನವಾಗಿ ಇಟ್ಟಿದ್ದೇವೆ. ಮಂಜುನಾಥ ಇಂಡಸ್ಟ್ರೀಸ್ ರವರು ಹಲವು ಕಂತುಗಳನ್ನು ಸಾಲದ ಮರುಪಾವತಿ ನೀಡಿದ್ದೆ. ಮಂಜುನಾಥ ಇಂಡಸ್ಟ್ರೀಸ್ ರವರು 1998 ರಿಂದ ಸಾಲ ಮರುಪಾವತಿ ನೀಡುವುದನ್ನು ನಿಲ್ಲಿಸಿರುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಆಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**